ಸನ್ಮಾನ್ಯ ಶಾಸಕರ ಜೊತೆಯಲ್ಲಿ ಪ್ರತಿಯೊಂದು ಕೆಲಸದಲ್ಲಿ ವಿಸಿಟ್ ಮಾಡಿ, ನಮ್ಮ ಚೀಫ್ ಇಂಜಿನಿಯರ್ ಮೇಜರ್ ವರ್ಕ್‌ಆಗಲಿ, ಅಥವಾ ಎಸ್.ಇ.ಗಳಿಗೆ ಹೇಳಿ ಈ ಕೆಲಸ ಸ್ಪೀಡ್‌ಅಪ್ ಮಾಡುವುದಕ್ಕೆ ಪ್ರಯತ್ನಿಸುತ್ತೇನೆ.

ಶ್ರೀ ಜೆ.ಟಿ. ಪಾಟೀಲ್: ಬಾಗಲಕೋಟೆಯಲ್ಲಿ ಚೀಫ್ ಇಂಜಿನಿಯರ್ ಆಫೀಸ್ ಏನು ಇದೆ ಇವರು ಈ ಕೆಲಸಕ್ಕೆ ನಮಗೇನೂ ಸಂಬಂಧವಿಲ್ಲದ ರೀತಿಯಲ್ಲಿ ವರ್ತಿಸುತ್ತಿದ್ದು ದಯಮಾಡಿ ತಾವು ನಿಗಾ ವಹಿಸಿ ಮೇಜರ್ ವರ್ಕ್ಸ್‌ನವರು ಏನು ಇದ್ದಾರೆ ಅವರಿಗೆ ಒಂದು ಕಾಲಮಿತಿ ಹಾಕಿ ಈ ಕೆಲಸ ಮುಗಿಸುವುದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ವೀರಕುಮಾರ್ ಅ. ಪಾಟೀಲ್: ಆ ಟೈಮ್‌ಬಾಂಡ್ ಪ್ರೋಗ್ರಾಂ ಸ್ವಲ್ಪ ಎಕ್ಸ್‌ಟೆನ್‌ಷನ್ ಆಗಿದ್ದು, ಶಾಸಕರ ಜೊತೆಯಲ್ಲಿ ಮೀಟಿಂಗ್ ಮಾಡಿ ನಾನು ಸೂಚಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಚಿಲುವರಾಯ ಸ್ವಾಮಿ ಹಾಗೂ ಮಾನ್ಯ ವಿಶ್ವೇಶ್ವರ ಹೆಗಡೆಯವರ ಪ್ರಶ್ನೆಯನ್ನು ಮುಂದಿನ ದಿನಗಳಲ್ಲಿ ಅಂದರೆ ಬುಧವಾರ, ಗುರುವಾರ, ಶುಕ್ರವಾರ, ಕಡಿಮೆ ಪ್ರಶ್ನೆಗಳಿದ್ದು ಆ ಸಮಯದಲ್ಲಿ ಇದನ್ನು ಏಕೆ ತೆಗೆದುಕೊಳ್ಳಬಾರದು? ಏಕೆಂದರೆ ಈಗಾಗಲೇ ಪ್ರಶ್ನೋತ್ತರ ವೇಳೆ ಮುಗಿದು ಐದು ನಿಮಿಷಗಳಾಗಿರುವುದರಿಂದ ಮುಂದೆ ಅವಕಾಶ ಮಾಡಿಕೊಡುತ್ತೇನೆ ಆಗ ತಾವು ಹೆಚ್ಚಿಗೆ ವಿವರಣೆ ಕೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನನ್ನ ಪ್ರಶ್ನೆ ಗಣಿ ಮತ್ತು ಭೂ ವಿಜ್ಞಾನಕ್ಕೆ ಸಂಬಂಧಪಟ್ಟಿದ್ದನ್ನು ತಾವು ಗುರುವಾರದಂದು ಅವಕಾಶ ಮಾಡಿಕೊಡಿ, ಈಗ ಮಾನ್ಯ ಜಗದೀಶ್ ಶೆಟ್ಟರ್‌ರವರ ಪ್ರಶ್ನೆ ಏನು ಇದೆ ಅದನ್ನು ನಾನು ಕೇಳುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ತಾವು ಹೇಳುವುದು ನಿಜ ನನ್ನ ಸಲಹೆ ಏನೆಂದರೆ, ನಾಳೆ ಕೇವಲ 12 ಪ್ರಶ್ನೆಗಳಿದ್ದು, ಬುಧವಾರ, ಗುರುವಾರ, ಶುಕ್ರವಾರ ಹಾಗೂ ಶನಿವಾರಗಳಂದು 4-5 ಪ್ರಶ್ನೆಗಳಿರುವುದರಿಂದ ಆ ದಿವಸಗಳಲ್ಲಿ ತೆಗೆದುಕೊಂಡು ಹೆಚ್ಚಿನ ವಿವರಣೆ ಕೇಳಬಹುದಲ್ಲವೆ? ಅವರು ಈಗಲೇ ಉತ್ತರ ಕೊಡುವವರು ಇದ್ದರೆ ಕೇಳಿ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಸಿ. ಚನ್ನಿಗಪ್ಪ: ಮಾನ್ಯ ಚಿಲುವರಾಯ ಸ್ವಾಮಿ ಅವರ ಪ್ರಶ್ನೆ ಕೇಳಬಯಸುತ್ತೇನೆ.

ಅಧ್ಯಕ್ಷರು: ಆಯಿತು ತಾವು ಕೇಳಿ, ಮುಂದಿನ ದಿವಸಗಳಲ್ಲಿ ಸಾಕಷ್ಟು ಸಮಯ ಸಿಗುತ್ತಿತ್ತು ಆಗತಾವು ಪ್ರಶ್ನೆ ಕೇಳಬಹುದಲ್ಲವೆಂದು ನಾನು ಹೇಳಿದ್ದು. ಅಷ್ಟೇ ಇದರಲ್ಲಿ ಬೇರೆ ಏನೂ ಇಲ್ಲ.

ನಾಗಮಂಗಲ ತಾಲ್ಲೂಕಿನಲ್ಲಿ ಅಗ್ನಿಶಾಮಕ ಠಾಣೆ ಮಂಜುರಾತಿ:

4 (203) ಶ್ರೀ ಚಲುವರಾಯಸ್ವಾಮಿ (ನಾಗಮಂಗಲ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ನಾಗಮಂಗಲ ತಾಲ್ಲೂಕಿನ ಕೆಲವು ಭಾಗವು ಒಣ ಪ್ರದೇಶವಾಗಿದ್ದು, ಬೇಸಿಗೆಯಲ್ಲಿ ಬೆಂಕಿ ಅನಾಹುತದಿಂದ ಬೆಳೆ ನಾಶವಾಗುತ್ತಿದ್ದು, ಅಗ್ನಿಶಾಮಕ ಠಾಣೆಯ ಅವಶ್ಯಕತೆ ಇರುವುದರ

ಬಗ್ಗೆ ಸರ್ಕಾರಕ್ಕೆ ಸಾಕಷ್ಟು ಬಾರಿ ಗಮನಕ್ಕೆ ಬಂದಿದ್ದರೂ ಸಹ ಠಾಣೆಯನ್ನು ತೆರೆಯದಿರಲು ಕಾರಣಗಳೇನು; ಸರ್ಕಾರವು ಇದರ ಬಗ್ಗೆ ಗಮನ ಹರಿಸುವುದೇ;

2) ಮಂಡ್ಯ ಉಪ ಬಂದೀಖಾನೆ 25 ವರ್ಷಗಳಿಂದಲೂ ಇದ್ದ ಸ್ಥಿತಿಯಲ್ಲೇ ಇರುವುದರಿಂದ, ಸದರಿ ಬಂದೀಖಾನೆಯ ಅಭಿವೃದ್ಧಿಯ ಬಗ್ಗೆ ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

1) ನಾಗಮಂಗಲ ತಾಲ್ಲೂಕಿನಲ್ಲಿ ಅಗ್ನಿ ದುರಂತಗಳು ಬಹಳ ಕಡಿಮೆಯಿರುವುದರಿಂದ ಅಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆದಿರುವುದಿಲ್ಲ.

2) ಮಂಡ್ಯ ಉಪ ಕಾರಾಗೃಹದಲ್ಲಿ ಅಧಿಕೃತ ಸಂಖ್ಯೆಗಿಂತ ಹೆಚ್ಚು ಬಂಧಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿ ಇರುವ ಹೆಚ್ಚು ಬಂಧಿಗಳಿಗೆ ತಕ್ಕಂತೆ ಹೊಸ ಬ್ಯಾರಾಕ್‌ಗಳನ್ನು ಕಟ್ಟಲು ಹಾಗೂ ಅಡಿಗೆಮನೆ, ಒಳಚರಂಡಿ ವ್ಯವಸ್ಥೆ, ಸ್ನಾನದ ಘಟ್ಟ ಮುಂತಾದವುಗಳನ್ನು ಅಭಿವೃದ್ಧಿ ಪಡಿಸಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಹಾಗೆಯೇ ಕಾರಾಗೃಹ ಆಧುನೀಕರಣದ ಯೋಜನೆಯಡಿಯಲ್ಲಿ ಆ ಕಾರಾಗೃಹದಲ್ಲಿ ಜನರೇಟರ್ ಸೆಟ್, ಅಂಬುಲೆನ್ಸ್ ವ್ಯಾನ್, ಟಿ.ವಿ.ಗಳು, ಮಾದ್ಯೋಪಕರಣಗಳು, ಸೀಲಿಂಗ್ ಫ್ಯಾನ್ ಮತ್ತು ಇತರೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅಲ್ಲದೆ ಮಂಡ್ಯ ಕಾರಾಗೃಹದಲ್ಲಿ ಇರುವ ಖೈದಿಗಳ ಸಂಖ್ಯೆಯನ್ನು ತಗ್ಗಿಸುವ ದೃಷ್ಟಿಯಿಂದ ಸೂಕ್ತ ತಾಲ್ಲೂಕು ಸ್ಥಳಗಳಲ್ಲಿ ಒಂದೆರಡು ಉಪ ಕಾರಾಗೃಹಗಳನ್ನು ಸ್ಥಾಪಿಸುವ ಯೋಜನೆಯು ಸಹ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಸಿ. ಚೆನ್ನಿಗಪ್ಪ (ಮಾನ್ಯ ಚೆಲುವರಾಯ ಸ್ವಾಮಿ ಅವರ ಪರವಾಗಿ): ನಾಗಮಂಗಲ ಬಹಳ ದೊಡ್ಡದಾದ ತಾಲ್ಲೂಕು ಆಗಿದ್ದು ಅಲ್ಲಿ ಅನೇಕ ವ್ಯವಸಾಯಗಾರರು ವಾಸವಾಗಿರುತ್ತಾರೆ. ಇಲ್ಲಿ ಆಗಾಗ ಬಣವಿಗಳಿಗೆ ಹಾಗೂ ಬೆಳೆಗಳಿಗೆ ಬೆಂಕಿ ಬಿದ್ದು, ಕಬ್ಬಿನ ಬೆಳೆಗಳಿಗೂ ಬೆಂಕಿ ಬಿದ್ದು ಸಾಕಷ್ಟು ಅನಾಹುತವಾಗುತ್ತದೆ. ಇಂಥ ಸಮಯದಲ್ಲಿ ಅವಶ್ಯವಾಗಿ ಬೇಕಾಗಿರುವ ಅಗ್ನಿಶಾಮಕ ಠಾಣೆ ಹತ್ತಿರದಲ್ಲಿ ಇಲ್ಲ, ಹೀಗಾಗಿ ಜಿಲ್ಲೆಯ ಹೆಡ್‌ಕ್ವಾರ್ಟರ್‌ನಿಂದ ಬರಬೇಕಾದರೆ ಬಹಳ ವಿಳಂಬವಾಗುತ್ತದೆ. ಈ ಬಗ್ಗೆ ಅನೇಕ ಬಾರಿ ಮನವಿ ಮಾಡಿದ್ದರೂ ಈವರೆವಿಗೂ ಈ ಕೆಲಸವಾಗಿರುವುದಿಲ್ಲ, ದಯಮಾಡಿ ಮಾನ್ಯ ಸಚಿವರು ಇದರ ಬಗ್ಗೆ ನಿರ್ಧಾರ ಕೈಗೊಂಡು ಅಗ್ನಿ ಶಾಮಕ ಠಾಣೆಯನ್ನು ತೆರೆಯಲು ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾಗಮಂಗಲ ತಾಲ್ಲೂಕಿನಲ್ಲಿ ಅಗ್ನಿ ದುರಂತಗಳು ಬಹಳ ಕಡಿಮೆ. ಉದಾಹರಣೆಗೆ ಹೇಳುವುದಾದರೆ, 1996ರಲ್ಲಿ 4 ಘಟನೆ ನಡೆದು ಇದ್ದು 92 ಸಾವಿರ ರೂಪಾಯಿ, 1997ರಲ್ಲಿ ಒಂದು ಘಟನೆ ನಡೆದಿದ್ದು 48 ಸಾವಿರ ರೂಪಾಯಿ, 1999ರಲ್ಲಿ 7 ಘಟನೆ ನಡೆದಿದ್ದು 1,85,000-00, 2000ರಲ್ಲಿ 6 ಘಟನೆ ನಡೆದಿದ್ದು 1,74,000-00 ರೂಪಾಯಿ ಖರ್ಚಾಗಿರುವುದು; ಇದನ್ನು ನೋಡಿದರೆ ಅಗ್ನಿಶಾಮಕದಳದ ಖರ್ಚೆ ಜಾಸ್ತಿಯಾಗುತ್ತದೆಯೇ ವಿನಾಃ ಅಲ್ಲಿ ನಡೆದಂಥ ಲುಕ್ಸಾನು ಬಹಳ ಕಡಿಮೆ. ಮೂಗಿಗಿಂತ ಮೂಗುತಿ ಭಾರ ಎನ್ನುವಂತಾಗಿದೆ. ಏಕೆಂದರೆ, ಚನ್ನರಾಯಪಟ್ಟಣ ಹಾಗೂ ಕುಣಿಗಲ್‌ನಲ್ಲಿ ಇರುವ ಕೇಂದ್ರಗಳು

ಇದಕ್ಕೆ ಹತ್ತಿರ ಇರುವುದರಿಂದ ಇದರ ಆವಶ್ಯಕತೆಯಿಲ್ಲವೆಂದು ಇಲಾಖೆಯವರು ಹೇಳಿರುವುದರಿಂದ ಸಧ್ಯಕ್ಕೆ ಅಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಮುಂದೆ ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಅಗ್ನಿಶಾಮಕ ಕೇಂದ್ರಗಳನ್ನು ತೆರೆಯುವ ಪ್ರಸ್ತಾವನೆ ಬಂದಾಗ ಬೇಕಾದರೆ ಯೋಚಿಸಬಹುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಮುಖ್ಯಮಂತ್ರಿಗಳು ಪ್ರತಿ ತಾಲ್ಲೂಕಿಗೆ ಅಗ್ನಿಶಾಮಕದ ಕೇಂದ್ರಗಳನ್ನು ಕೊಡುತ್ತೇವೆಂದು ಹೇಳಿದ್ದರು, ಇದರ ಬಗ್ಗೆ ಮಾನ್ಯ ಸಚಿವರು ನಿಗಾ ವಹಿಸಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪ್ರತಿಯೊಂದು ತಾಲ್ಲೂಕಿಗೂ ಕೊಡಬೇಕು ಎಂದು ಹೇಳುವುದಾದರೆ ಮಾನ್ಯ ಚಂದ್ರೇಗೌಡರವರಿಗೆ ಮೂರು ತಾಲ್ಲೂಕುಗಳು ಬರುತ್ತವೆ, ಹೀಗಾಗಿ ಮಾಡುವುದಕ್ಕೆ ಆಗುವುದಿಲ್ಲ, ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಕೊಡಬಹುದು, ಎಲ್ಲಿ ಹೆಚ್ಚಿನ ತೊಂದರೆಯಿದ್ದು, ಪಾರುಕಟ್ಟೆ ಯಾರ್ಡ್ ಇದ್ದು ಹೆಚ್ಚಿನ ಅನಾಹುತ ಸಂಭವಿಸುವ ಜಾಗಗಳಿದ್ದಲ್ಲಿ ಪರಿಶೀಲಿಸಿ ಅವಶ್ಯಕತೆ ಇದ್ದರೆ ಅಂಥ ಕಡೆ ಕೊಡಬಹುದು. ಪ್ರತಿಯೊಂದು ತಾಲ್ಲೂಕಿಗೂ ಕಡ್ಡಾಯವಾಗಿ ಅಗ್ನಿಶಾಮಕ ಕೇಂದ್ರವನ್ನು ತೆರೆಯುತ್ತೇವೆಂದು ಯಾವ ಸರ್ಕಾರ ಕೂಡ ಹೇಳಿಲ್ಲ ಇವತ್ತು ಕೂಡ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಚನ್ನಿಗಪ್ಪ: ಮಂಡ್ಯ ಟೌನ ಬಂದೀಖಾನೆ ಪ್ರಾರಂಭವಾಗಿದ್ದು ಸ್ವಾತಂತ್ರ್ಯಕಾಲದಿಂದ ಇದೆ, ಇವತ್ತು ಜನಸಂಖ್ಯೆ ಹೆಚ್ಚಾಗಿದ್ದು, ಅಪರಾಧಗಳು ಹೆಚ್ಚಾಗಿದ್ದು, ಬಹಳ ಕೊಂದರೆಯಿದ್ದರೂ ಆ ಜೈಲು ಮಾತ್ರ ಸುಮಾರಷ್ಟೆಂಯಾಗದೇ ಹಾಗೆ ಇದೆ. ಆದ್ದರಿಂದ, ಇದನ್ನು ಅಭಿವೃದ್ಧಿಪಡಿಸಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವೇನು ಆಕಡೆ ಹೋಗಿಲ್ಲ ನೋಡಿಲ್ಲ. ಸುಮ್ಮನೆ ಏಕೆ ಹೇಳುತ್ತೀರಿ ?

ಶ್ರೀ ಸಿ. ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮದೇನು ಮುನಿಸಿಪಾಲಿಟಿ ಪಾರ್ಟಿಯಲ್ಲ. ಜೆ.ಡಿ.(ಎಸ್) ಪಕ್ಷ ಇಡೀ ರಾಜ್ಯಾದ್ಯಂತ ಇದೆ. ನಾವು ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡುವುದರಿಂದ ಅಲ್ಲಿನ ಎಲ್ಲ ವಿಷಯಗಳು ನಮಗೆ ಗೊತ್ತಾಗುತ್ತದೆ. ಆದ್ದರಿಂದ ಸದರಿ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಅಲ್ಲಿ ಸ್ಥಳದ ಅಭಾವವಿದೆ ಎಂದು ಸರ್ಕಾರಕ್ಕೆ ಮನವರಿಕೆಯಾಗಿದೆ. ಇದಕ್ಕಾಗಿ 68 ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ತಯಾರು ಮಾಡಿದ್ದೇವೆ. ಇದರಲ್ಲಿ ಈ ವರ್ಷ, ಮಾರ್ಚ್ ತಿಂಗಳೊಳಗಾಗಿ 38 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ, ಮೊದಲು ಅಲ್ಲಿನ ದುರಸ್ತಿ ಕೆಲಸವನ್ನು ಮಾಡಿಸಲಾಗುತ್ತದೆ. ಆ ನಂತರ ಉಳಿದ 24 ಲಕ್ಷ ರೂಪಾಯಿಗಳನ್ನು 2001-2002ನೇ ಸಾಲಿನಲ್ಲಿ ಬಿಡುಗಡೆ ಮಾಡಿ ಉಳಿದಿರತಕ್ಕಂಥ ಎಲ್ಲಾ ಕೆಲಸವನ್ನು ಮಾಡಿಸುತ್ತೇವೆ.